# Views on Venkatram ...Shudra Srinivas

## ಎಸ್. ವೆಂಕಟರಾಮ್ : ಒಂದು ನೋಟ

## – ಶೂದ್ರ ಶ್ರೀನಿವಾಸ್

ಎಸ್. ವೆಂಕಟರಾಮ್ ಎಂದಾಕ್ಷಣ ಅವರ ಎತ್ತರದ ನಿಲುವು, ಗಂಭೀರ ಮುಖಭಾವ ಮತ್ತು ದಪ್ಪನೆಯ ಗಾಜಿನ ಕನ್ನಡಕ ನೆನಪಿಗೆ ಬರುತ್ತದೆ. ಇದರ ನಂತರ ಅವರ ವ್ಯಕ್ತಿತ್ವದ ಹತ್ತಾರು ಚಿತ್ರಗಳು ಮುಂದೆ ಬಂದು ನಿಲ್ಲುತ್ತವೆ. ನನ್ನ ಬದುಕಿನಲ್ಲಿ ಇಬ್ಬರು ಮಹಾನ್ ವ್ಯಕ್ತಿಗಳನ್ನು ಮರೆಯಲು ಸಾಧ್ಯವಿಲ್ಲ. ಒಬ್ಬರು ಲಂಕೇಶ್‌ರವರು, ಮತ್ತೊಬ್ಬರು ಎಸ್. ವೆಂಕಟರಾಮ್‌ರವರು. ವೆಂಕಟರಾಮ್‌ರವರ ಜೊತೆ ಆತ್ಮೀಯವಾದ ಸಂಪರ್ಕವಿದ್ದುದು ಕೇವಲ ಹನ್ನೆರಡು ವರ್ಷ. ಅಷ್ಟರಲ್ಲಿ ಅವರ ಶಿಸ್ತುಬದ್ಧ ಬದುಕು ಮತ್ತು ಚಿಂತನೆಯ ಕ್ರಮ ಅಪೂರ್ವವಾದದ್ದು. ಅವರ ಮುಂದೆ ಕೂತಿದ್ದಷ್ಟು ನಾವು ಯಾವುದನ್ನು 'ವರ್ಲ್ಡ್ ಫರ್ಸ್ಪೆಕ್ಟೀವ್' ಎಂದು ಹೇಳುತ್ತೇವೋ ಅದು ಲಭ್ಯವಾಗುತ್ತಿತ್ತು. ಇದನ್ನು ನಾನು ಅವರಿಂದ ನಾನಾ ರೀತಿಯಲ್ಲಿ ಪಡೆದೆ. ಹಾಗೆ ನೋಡಿದರೆ ಪ್ರಾರಂಭದಲ್ಲಿ 'ಶೂದ್ರ' ಎಂಬ ಹೆಸರನ್ನು ಸೂಚಿಸಿದವರೇ ವೆಂಕಟರಾಮ್ ರವರು. ಆದರೆ ೧೯೭೩ರಲ್ಲಿ 'ಶೂದ್ರ' ವನ್ನು ತರುವುದಕ್ಕೆ ಮುಂಚೆಯೇ ಅವರ ಸಂಪರ್ಕ ದಟ್ಟವಾಗಿತ್ತು. ಮೂಲಭೂತವಾಗಿ ವಿದ್ಯಾರ್ಥಿದೆಸೆಯ ಕಾಲೇಜು ದಿನಗಳ ಪ್ರಾರಂಭದಲ್ಲಿ ನಾನು ಕಾಂಗ್ರೆಸ್ ಪಕ್ಷದಲ್ಲಿ ತೊಡಗಿಸಿಕೊಂಡಿದ್ದವನು. ಅದರಲ್ಲೂ ಸಂಸ್ಥಾ ಕಾಂಗ್ರೆಸ್‌ನ ದಿನಗಳು. ಸಮಾಜವಾದಿ ಪಕ್ಷವನ್ನು ಆ ದಿನಗಳಲ್ಲಿ ಲಂಕೇಶ್‌ರವರು ಪರಿಚಯಿಸಿದ್ದರಿಂದ ನಿಧಾನವಾಗಿ ಕಾಂಗ್ರೆಸ್‌ನಿಂದ ಬಿಡುಗಡೆಯಾಗಲು ಪ್ರಯತ್ನಿಸಿದೆ. ಇದಕ್ಕೆ ಲೋಹಿಯಾರವರ ಓದು ಸಮಾಜವಾದಿ ಪಕ್ಷದ ಒಡನಾಟ ಮಹತ್ವಪೂರ್ಣವಾದದ್ದು. ಮತ್ತೊಂದು ಮುಖ್ಯ ವಿಷಯ : ಶಾಂತವೇರಿ ಗೋಪಾಲಗೌಡರು ಅನಾರೋಗ್ಯದಿಂದ ನರಳುತ್ತ ವಿಕ್ಟೋರಿಯ ಆಸ್ಪತ್ರೆಯಲ್ಲಿದ್ದಾಗ ಅವರನ್ನು ನೋಡಿಕೊಳ್ಳಲು ಕೋಣಂದೂರು ಲಿಂಗಪ್ಪ, ಬಂದಗದ್ದೆ ರಮೇಶ್‌ರವರ ಜೊತೆಗೆ ನನ್ನನ್ನು ತೊಡಗಿಸಿದ್ದರು. ಗೋಪಾಲಗೌಡರ ಆಸ್ಪತ್ರೆಯ ದಿನಗಳು ಅತ್ಯಂತ ವಿಷಾದದ ದಿನಗಳು. ಪ್ರತಿದಿನ ಸಂಜೆ ವೆಂಕಟರಾಮ್ ರವರು ಆಸ್ಪತ್ರೆಗೆ

ಬಂದು ಒಂದರ್ಧ ಗಂಟೆ ಇದ್ದು ಒಟ್ಟು ಚಿಕಿತ್ಸೆಯ ಸ್ವರೂಪವನ್ನು ನೋಡಿಕೊಂಡು ಹೋಗುತ್ತಿದ್ದರು.

ಈ ಆಸ್ಪತ್ರೆಯ ದಿನಗಳಿಗಿಂತ ಮೊದಲು ಒಂದು ಚಾರಿತ್ರಿಕ ಸಂಗತಿಯೊಂದು ನಡೆಯಿತು. ಮಹಾನ್ ಕವಿ ಗೋಪಾಲಕೃಷ್ಣ ಅಡಿಗರಿಗೆ ಶಾಂತವೇರಿಯವರ ಬಗ್ಗೆ ಎಲ್ಲಿಲ್ಲದ ಪ್ರೀತಿ ಮತ್ತು ಅಭಿಮಾನ. ಅವರನ್ನು ಎರಡು ದಿನವಾದರೂ ಮುಖ್ಯಮಂತ್ರಿ ಮಾಡಿ ಸಂತೋಷ ಪಡಬೇಕು ಎಂದು ಯೋಚಿಸಿ ಕಾರ್ಯಪ್ರವೃತ್ತರಾದವರು. ಇದಕ್ಕೆ ಪೂರಕವಾಗಿ ಕರ್ನಾಟಕ ರಾಜಕೀಯ ಪರಿಸ್ಥಿತಿಯೂ ಹಾಗೆಯೇ ಇತ್ತು. ವೀರೇಂದ್ರ ಪಾಟೀಲರು ಅಧಿಕಾರವನ್ನು ಕಳೆದುಕೊಳ್ಳುವ ಕೊನೆಯ ಹಂತದಲ್ಲಿದ್ದರು. ಇದೇ ಸಮಯದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಒಂದು ಮಹತ್ವಪೂರ್ಣ ವಾರ್ಷಿಕ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಕನ್ನಡದ ಬಹುಪಾಲು ಪ್ರಮುಖ ಲೇಖಕರು ಇದರಲ್ಲಿ ಭಾಗವಹಿಸಿದ್ದರು. ಎಲ್ಲರೂ ಬೆಂಗಳೂರಿನ ಕೆಂಪೇಗೌಡ ರಸ್ತೆಯ ಎನ್.ಎಂ.ಸಿ. ಯಲ್ಲಿ ಉಳಿದುಕೊಂಡಿದ್ದರು. ನಾನು ಅವರನ್ನು ನೋಡಿಕೊಳ್ಳುವ ಕಾರ್ಯಕರ್ತನಾಗಿದ್ದೆ. ಜಿ.ಎಸ್. ಶಿವರುದ್ರಪ್ಪನವರು ಈ ಜವಾಬ್ದಾರಿಯನ್ನು ವಹಿಸಿದ್ದರು. ಆಗ ನಾನು ಎರಡನೆಯ ಬಿ.ಎ. (ಆನರ್ಸ್) ವಿದ್ಯಾರ್ಥಿ. ಆ ಸಂದರ್ಭದಲ್ಲಿ ಕೆಲವು ಮೂಲಭೂತ ಸಮಸ್ಯೆಗಳನ್ನು ಕಾಂಗ್ರೆಸ್ ಪಕ್ಷವನ್ನು ದೃಷ್ಟಿಯಲ್ಲಿಟ್ಟುಕೊಂಡು ವೆಂಕಟರಾಮ್‌ರವರು ಪ್ರಸ್ತಾಪಿಸಿದ್ದರು. ಹಾಗೆ ನೋಡಿದರೆ ಶಾಂತವೇರಿಯವರು ಮುಖ್ಯಮಂತ್ರಿಯಾಗಲು ಉತ್ಸಾಹವನ್ನು ತೋರಿಸಿದವರಲ್ಲ.

ಎಸ್. ವೆಂಕಟರಾಮ್‌ರವರು ತಮ್ಮ ಬದುಕಿನುದ್ದಕ್ಕೂ ಕಾರ್ಮಿಕರ ಒಗ್ಗೂಡುವಿಕೆಯ ಬಗ್ಗೆ ಕ್ರಿಯಾಶೀಲರಾಗಿದ್ದವರು. ಕೇವಲ ಒಗ್ಗೂಡುವಿಕೆ ಮಾತ್ರವಲ್ಲ. ತಾತ್ವಿಕವಾಗಿ, ರಾಜಕೀಯವಾಗಿ ಅವರು ಬೆಳೆಯುವಂತೆ ನೋಡಿಕೊಂಡವರು. ಯಾರನ್ನೇ ಆಗಲಿ, ಯಾವುದನ್ನೇ ಆಗಲಿ ಅಂಧತ್ವದಲ್ಲಿಟ್ಟು ಹೋರಾಟ ನಡೆಸಿದವರಲ್ಲ. ಇದು ಅವರ ವ್ಯಕ್ತಿತ್ವದ ಮೂಲಭೂತ ನಡವಳಿಕೆಯಾಗಿತ್ತು. ಇಲ್ಲಿ ಪಕ್ಷಬೇಧ ಮರೆತು ತಮ್ಮನ್ನು ತೊಡಗಿಸಿಕೊಂಡಿದ್ದರು. ಆದ್ದರಿಂದ ಇಲ್ಲಿ ನಾನಾ ರೀತಿಯ ಕಾರ್ಮಿಕರು ಅವರನ್ನು 'ಮಹಾನ್ ನಾಯಕ' ನನ್ನಾಗಿಯೇ ನೋಡುತ್ತಿದ್ದರು.

ವೈಯಕ್ತಿಕವಾಗಿ ನಾನು ಮತ್ತು ಡಿ.ಆರ್. ನಾಗರಾಜ್ ಅವರಿಂದ ಮಾನಸಿಕವಾಗಿ ಸಾಕಷ್ಟು ಪಡೆದಿದ್ದೇವೆ. ತುರ್ತು ಪರಿಸ್ಥಿತಿಯ ಸಮಯದಲ್ಲಿರಬಹುದು, ಜನತಾ ಪಕ್ಷ ಹುಟ್ಟಿಕೊಂಡ ಸಮಯದಲ್ಲಿರಬಹುದು ಎಸ್. ವೆಂಕಟರಾಮ್‌ರವರ ಪಾತ್ರ ಅನನ್ಯವಾದುದ್ದು. ಹಾಗೆ ನೋಡಿದರೆ ಸಮಾಜವಾದಿ ಪಕ್ಷ ಜೀವಂತವಾಗಿದ್ದದ್ದು ಎಸ್. ವೆಂಕಟರಾಮ್‌ರವರ ಕಾರ್ಯದಕ್ಷತೆಯಿಂದ. ಅವರು ಏನೇ ಕೆಲಸ ತೆಗೆದುಕೊಂಡರೂ ಅದಕ್ಕೊಂದು ಶಿಸ್ತುಬದ್ಧ ಆಕಾರ ಕೊಡುತ್ತಿದ್ದರು. ಅದೇ ರೀತಿಯಲ್ಲಿ ಒಂದು ಅತ್ಯುತ್ತಮ ಕೃತಿಯನ್ನು ಓದಿದರೆ ಅದನ್ನು ಕುರಿತು ಚರ್ಚಿಸಲು ಅಭಿಪ್ರಾಯ ಹಂಚಿಕೊಳ್ಳಲು ಡಿ.ಆರ್. ನಾಗರಾಜನನ್ನು ಸೂ. ರಮಾಕಾಂತ್ ಮತ್ತು ನನ್ನನ್ನು ಬರಮಾಡಿಕೊಳ್ಳುತ್ತಿದ್ದರು. ಒಮ್ಮೊಮ್ಮೆ ಇದರಲ್ಲಿ ರಮೇಶ್ ಬಂದಗದ್ದೆ ಭಾಗವಹಿಸುತ್ತಿದ್ದರು. ಈ ಎಲ್ಲ ಮಾತುಕತೆಗಳಿಗೆ ಸಂಬಂಧಿಸಿದಂತೆ ನಾವು ಪಟ್ಟಾಭಿರಾಮರೆಡ್ಡಿ ಹಾಗೂ ಸ್ನೇಹಲತಾರೆಡ್ಡಿರವರ ಮನೆಯಲ್ಲಿ ಸೇರಿದ್ದೇವೆ. ಹಾಗೆಯೇ ಹೋಟೆಲ್ ಶ್ಯಾಮ್ ಪ್ರಕಾಶ್‌ನಲ್ಲಿ ಗಂಟೆಗಟ್ಟಲೆ ಕಾಫಿ ಚಪ್ಪರಿಸುತ್ತ ಮಾತಾಡಿದ್ದೇವೆ. ಕೆಲವೊಮ್ಮೆ ಬೆಚ್ಚನೆಯ ರಮ್ ಜೊತೆ.

ತುರ್ತು ಪರಿಸ್ಥಿತಿಯ ಸಮಯದಲ್ಲಿ ಪಟ್ಟಾಭಿರಾಮರೆಡ್ಡಿಯವರ ಮನೆಯಲ್ಲಿ ಪ್ರಸಿದ್ಧ ಸಂಸದ್ ಪಟು ಹಾಗೂ ಸಮಾಜವಾದಿ ಚಿಂತಕ ಮಧುಲಿಮಯೆ ಅವರ ನಡುವೆ ನಡೆದ ಚರ್ಚೆಯನ್ನು ಮರೆಯಲು ಸಾಧ್ಯವಿಲ್ಲ. ಅಂದು ರಾತ್ರಿ ಏಳು ಗಂಟೆಯಿಂದ ಬೆಳಗಿನ ಜಾವ ಮೂರು ನಾಲ್ಕು ಗಂಟೆಯವರೆವಿಗೂ ನಡೆದಿತ್ತು. ಇದನ್ನು ಎಸ್. ವೆಂಕಟರಾಮ್‌ರವರು ಮಾಡರೇಟರ್ ರೀತಿಯಲ್ಲಿ ನಡೆಸಿಕೊಟ್ಟರು. ಅಂದು ಇದರಲ್ಲಿ ಎಂ.ಪಿ. ಪ್ರಕಾಶ್, ಪಟ್ಟಾಭಿರಾಮರೆಡ್ಡಿ, ಸ್ನೇಹಲತಾರೆಡ್ಡಿ, ರಮೇಶ್ ಬಂದಗದ್ದೆ, ಲಾರಿ ವೆಂಕಟಸ್ವಾಮಿ ಮುಂತಾದವರೆಲ್ಲ ಭಾಗವಹಿಸಿದ್ದರು. ಈ ರೀತಿಯ ಚಾರಿತ್ರಿಕ ಮಾತುಕತೆಯನ್ನು ಪಟ್ಟಾಭಿಯವರ ಮನೆಯಲ್ಲಿ ಸಿಜಿಕೆ ರೆಡ್ಡಿ ಹಾಗೂ ತಮ್ಮ ಮನೆಯಲ್ಲಿ ಎಷ್ಟೊಂದು ನಡೆಸಿಕೊಟ್ಟಿದ್ದಾರೆ. ಜಾರ್ಜ್ ಫರ್ನಾಂಡೀಸ್, ಸುರೇಂದ್ರ ಮೋಹನ್, ರಬಿರಾಯ್, ವೀರೇಂದ್ರಕುಮಾರ್ ಮುಂತಾದವರು ಬಂದಾಗ ಆತ್ಮೀಯವಾಗಿ ಚರ್ಚೆಯನ್ನು ಏರ್ಪಡಿಸುತ್ತಿದ್ದರು. ಇದು ಭಾರತದ ರಾಜಕೀಯ ಮತ್ತು ಸಾಮಾಜಿಕ ಸ್ಥಿತ್ಯಂತರಗಳನ್ನು ಅರಿಯಲು ಸಾಕಷ್ಟು ಸಾಧ್ಯವಾಗಿದೆ.

ಬೆಂಗಳೂರಿಗೆ ಷೇಕ್ ಅಬ್ದುಲ್ಲಾ ಬಂದಾಗ ಬೆಂಗಳೂರಿನ ಪತ್ರಕರ್ತರ ಸಂಘದಲ್ಲಿದ್ದ ಪ್ರೆಸ್‌ಮೀಟ್‌ಗೆ ನೆನಪು ಮಾಡಿ ಕಳುಹಿಸಿದರು. ಅದೇ ರೀತಿಯಲ್ಲಿ ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಭಾಷಣ ಕೇಳಲು ಸೆಂಟ್ರಲ್ ಕಾಲೇಜಿನ ಪೆವಿಲಿಯನ್‌ಗೆ ಕರೆದುಕೊಂಡು ಹೋದರು. ಇವರಿಬ್ಬರ ಬಗ್ಗೆ ವೆಂಕಟರಾಮ್ ಅವರಿಗೆ ಎಲ್ಲಿಲ್ಲದ ಅಭಿಮಾನ. ಒಂದು ದೃಷ್ಟಿಯಿಂದ ಭಾರತದ ಸಮಾಜವಾದಿ ಚಿಂತಕರು ಷೇಕ್ ಅಬ್ದುಲ್ಲಾರವರ ಬಂಧನವನ್ನು ವಿರೋಧಿಸಿದವರು. ಇದಕ್ಕೆ ಸಂಬಂಧಿಸಿದಂತೆ ನೆಹರೂ ರವರ ಜೊತೆ ಮುಖಾಮುಖಿಯಾದವರು.

ಎಸ್. ವೆಂಕಟರಾಮ್‌ರವರಿಂದ ಮಹಾನ್ ಗಾಯಕ ಪಿ. ಕಾಳಿಂಗರಾವ್‌ರವರನ್ನು ತುಂಬ ಹತ್ತಿರದಿಂದ ಅರಿಯಲು ಸಾಧ್ಯವಾಯಿತು. ಕಾಳಿಂಗರಾವ್ ಅವರು ಕುಡಿತಕ್ಕೆ ಸೋತಿದ್ದರು. ಬಹಳಷ್ಟು ಬಾರಿ ಸಂಜೆಯಾದರೆ ಸಾಕು ಸಮಾಜವಾದಿ ಪಕ್ಷದ ಕಛೇರಿಯಲ್ಲಿ ಬಂದು ಕೂರುತ್ತಿದ್ದರು. ಸುಮ್ಮನೆ ಮೌನಿಯಾಗಿ ಕೂರುತ್ತಿದ್ದರು. ಒಂದು ದಿನವೂ ಮಾತುಕತೆಯಲ್ಲಿ ತೊಡಗಿದವರಲ್ಲ. ಆದರೆ ಎಸ್. ವೆಂಕಟರಾಮ್‌ರವರು ನನಗೆ ಹತ್ತು ರೂಪಾಯಿ ಕೊಡುತ್ತಿದ್ದರು. ಅದರಿಂದ ಕಾಳಿಂಗರಾವ್ ಅವರನ್ನು ಕರೆದುಕೊಂಡು ಹೋಗಿ ಹೋಟೆಲ್ ಹಿಂದೂಸ್ತಾನ್ ಎದುರಿನ ಬಾರ್‌ನಲ್ಲಿ ಒಂದು ಕ್ವಾರ್ಟರ್ ತೆಗೆದುಕೊಡಬೇಕಾಗಿತ್ತು. ಕೆಲವು ಬಾರಿ ಕೈಯಿಂದ ಹತ್ತು ರೂಪಾಯಿ ತೆಗೆದುಕೊಂಡು ಅಲ್ಲಿಯೇ ಇದ್ದ ಸಾರಾಯಿ ಅಂಗಡಿಯಲ್ಲಿ ಸಾರಾಯಿ ಕುಡಿದು ವೆಂಕಟರಾಮ್, ಜೆ.ಎಚ್. ಪಟೇಲ್ ಹಾಗೂ ಕಾಗೋಡು ತಿಮ್ಮಪ್ಪ ಅವರಿಗೆ ಹೇಳಬೇಡ ಎಂದು ಸೂಚಿಸುತ್ತಿದ್ದರು.

ವೆಂಕಟರಾಮ್‌ರವರ ಕುಟುಂಬವೇ ಅಧ್ಭುತ ಕಲ್ಪನೆಯಿಂದ ಕೂಡಿತ್ತು. ವಿವಿಧ ಮತಭಾಂದವರೆಲ್ಲ ವೆಂಕಟರಾಮ್‌ರವರ ಸಲಹೆ ಪಡೆಯಲು ಬರುತ್ತಿದ್ದರು. ಅವರು ಕೇವಲ ರಾಜಕೀಯ ಪಕ್ಷಗಳ ಹಾಗೂ ಕಾರ್ಮಿಕ ವಲಯಕ್ಕೆ ಸೇರಿದವರರಾಗಿರಲಿಲ್ಲ. ಆಗ ಒಟ್ಟು ಕುಟುಂಬ ಎಷ್ಟು ಆತ್ಮೀಯವಾಗಿ ಸಂಧಿಸುತ್ತಿತ್ತು. ಶ್ರೀಮತಿ ಸರೋಜಮ್ಮನವರ ಮಾನಿಸಿಕ ವೈಶಲ್ಯತೆ ಅಪೂರ್ವವಾದದ್ದು.

ಎಸ್. ವೆಂಕಟರಾಮ್‌ರವರು 'ಶೂದ್ರ'ದಲ್ಲಿ ಫೆಡರಲ್ ಸಿಸ್ಟಮ್ ಬಗ್ಗೆ ಸಾಕಷ್ಟು ಲೇಖನಗಳನ್ನು ಬರೆದರು. ಇನ್ನೂ ಏನೇ ಅಮೂಲ್ಯ ಲೇಖನಗಳನ್ನು ಬರೆದರು. ಆದರೆ ಅವರ ಅಕಾಲ ಮರಣದ ಸಮಯದಲ್ಲಿ ನಾನು ಅವರ ಹತ್ತಿರ ಇರಲಿಲ್ಲವೆಂಬ ವಿಷಾದ ಈಗಲೂ ಕಾಡುತ್ತಿದೆ. ಆ ಸಮಯದಲ್ಲಿ ವಿವಿಧ ಕಲೆಗಳ ಅಭಿರುಚಿ ಶಿಬಿರದಲ್ಲಿ ಭಾಗವಹಿಸಲು ದೆಹಲಿಯಲ್ಲಿ ನಲವತ್ತು ದಿವಸ ಇದ್ದೆ. ವೆಂಕಟರಾಮ್‌ರವರ ಸಾವಿನ ವಿಷಯ ಗೊತ್ತಾಗಿದ್ದು ನನಗೆ ತುಂಬ ಪ್ರಿಯರಾದ ಲೇಖಕ ಶಾ. ಬಾಲೂರಾವ್ ಅವರಿಂದ. ನನ್ನಂಥವನಿಗೆ ಇಂದು ಲಂಕೇಶ್‌ರವರು, ಎಸ್. ವೆಂಕಟರಾಮ್ ಹಾಗೂ ಡಿ.ಆರ್. ನಾಗರಾಜ್ ಇಲ್ಲದ್ದು ದಟ್ಟ ಶೂನ್ಯವಾಗಿ ಕಾಡುತ್ತಿದೆ.